ದಿನಾಂಕ: 24.03.2021 ರಂದು ಬೆಳಗ್ಗೆ 11.00 ಗಂಟೆಗೆ ರಾಜಾಜಿನಗರ ವಾರ್ಡ್ ನಂ. 99 ರಲ್ಲಿ ಶ್ರೀ ಹೆಚ್.ವಿ. ಅಶ್ವತ್ಥ್, ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರ:-

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು:-**

1. ಶ್ರೀ ಹೆಚ್.ವಿ. ಅಶ್ವತ್ಥ, ನೋಡಲ್ ಅಧಿಕಾರಿಗಳು
2. ಶ್ರೀ ಸೋಮಶೇಖರ್.ಜಿ.ಎಲ್, ಸಹಾಯಕ ಅಭಿಯಂತರರು,
3. ಶ್ರೀ ಆನಂದ್, ಸಹಾಯಕ ಅಭಿಯಂತರರು , ಬೆಸ್ಕಾಂ
4. ಶ್ರೀ ಜಿ.ಸಿ. ಲೋಕೇಶ್, ಮೌಲ್ಯಮಾಪಕರು, ಕಂದಾಯ ಇಲಾಖೆ,
5. ಶ್ರೀ ಪರಮೇಶ್, ವಿ.ಎ. ಉಪತಹಶೀಲ್ದಾರ್ ಕಛೇರಿ
6. ಶ್ರೀ ಬಸವರಾಜು, ಆಹಾರ ನಿರೀಕ್ಷಕರು
7. ಶ್ರೀ ಮಲ್ಲಿಕಾರ್ಜುನ್, ಮಾಪನ ಓದುಗ,
8. ಶ್ರೀ ಸಂತೋಷ್ ನಾಯಕ್, ಹಿರಿಯ ಆರೋಗ್ಯ ಪರಿವೀಕ್ಷಕರು
9. ಶ್ರೀ ರಮೇಶ್, ಪಶು ಸಂಘೋಪನ ಇಲಾಖೆ,
10. ಶ್ರೀ ರಘು, ಕಿರಿಯ ಆರೋಗ್ಯ ಪರಿವೀಕ್ಷಕರು
15. ಶ್ರೀ ಶ್ರೀನಿವಾಸ್.ಎನ್. ಸದಸ್ಯರು
16. ಶ್ರೀ ಉಮೇಶ್, ಸದಸ್ಯರು,
17. ಶ್ರೀ ರಾಜಣ್ಣ, ಸದಸ್ಯರು
18. ಶ್ರೀ ಆನಂದ್, ಸದಸ್ಯರು

ದಿನಾಂಕ: 24.03.2021 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ. 99 ರಾಜಾಜಿನಗರದ ಡಾ: ಅಬ್ದುಲ್ ಕಲಾಂ, ಸಭಾಂಗಣದಲ್ಲಿ ಪಾಲಿಕೆ ಅಧಿಕಾರಿಗಳೊಂದಿಗೆ ಸಭೆಯನ್ನು ಕೈಗೊಂಡು ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಯಿತು.

1. ಹಿಂದಿನ ಸಭೆಯ ನಡವಳಿಯ ಪಟ್ಟಿಯನ್ನು ಸಭೆಗೆ ಮಂಡಿಸಲಾಯಿತು.
2. ಹಿಂದಿನ ಸಭೆಯಲ್ಲಿ ತೆಗೆದುಕೊಂಡ ನಡವಳಿಗಳ ಅನುಷ್ಠಾನದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.
3. ಶ್ರೀ ರಾಜಣ್ಣ, ವಾರ್ಡ್ ಕಮಿಟಿ ಸದಸ್ಯರು ಮಾತನಾಡುತ್ತಾ, ಇಂದಿರಾನಗರ 11ನೇ ಅಡ್ಡ ರಸ್ತೆಯ ಕಾಮಗಾರಿಯು ಅಪೂರ್ಣಗೊಂಡಿರುವುದರಿಂದ ಅಲ್ಲಿನ ನಿವಾಸಿಗಳಿಗೆ ತೊಂದರೆಯಾಗುತ್ತಿರುವುದಾಗಿ ಸಭೆಯಲಿ ತಿಳಿಸಿದರು. ಇದಕ್ಕೆ ಉತ್ತರವಾಗಿ ವಾರ್ಡ್ ಸಹಾಯಕ ಅಭಿಯಂತರರು ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.
4. ವಾರ್ಡ್ ಕಮಿಟಿ ಸದಸ್ಯರುಗಳು ಮಾತನಾಡುತ್ತಾ, ಸಿಲ್ಟ್ ಅಂಡ್ ಟ್ರಾಕ್ಟರ್ ಇಲ್ಲದೇ ಇರುವುದರಿಂದ ವಾರ್ಡಿನಲ್ಲಿ ಸಾರ್ವಜನಿಕರಿಂದ ಬರುವ ಸಮಸ್ಯೆಗಳನ್ನು ತುರ್ತಾಗಿ ಪರಿಹರಿಸಲು ಸಮಸ್ಯೆಯಾಗುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು.
5. ಶ್ರೀ ಬಸವರಾಜು , ಆಹಾರ ನಿರೀಕ್ಷಕರು ಮಾತನಾಡುತ್ತಾ, ಪ್ರತಿ ದಿನ 20 ಆಹಾರ ಕಾರ್ಡ್‌ಗಳನ್ನು ಪತ್ತೆಹಚ್ಚುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು.
6. ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ನಾಡಿಗರ್ ಕಾಲೇಜ್, ಜೆ.ಸಿ. ಬೇಕರಿ ಹತ್ತಿರ ಬೆಸ್ಕಾಂ ವತಿಯಿಂದ ಕೇಬಲ್ ಅಳವಡಿಸಲು ರಸ್ತೆ ಕತ್ತರಿಸಲಾಗಿದ್ದು, ಸದರಿ ಸ್ಥಳದಲ್ಲಿರುವ ಮಣ್ಣನ್ನು ತೆರವುಗೊಳಿಸಿರುವುದಿಲ್ಲವೆಂದು ಸಭೆಯಲ್ಲಿ ತಿಳಿಸಿದರು. ಇದಕ್ಕೆ ಉತ್ತರವಾಗಿ ಸಹಾಯಕ ಅಭಿಯಂತರರು ಪರಿಶೀಲಿಸಿ, ತೆರವುಗೊಳಿಸುವುದಾಗಿ ಸಭೆಗೆ ತಿಳಿಸಿದರು.

ಪು.ತಿ.ನೋ.

Scanned with CamScanner

7. ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಬೆಸ್ಕಾಂ ವತಿಯಿಂದ 11 ಕೆ.ವಿ. ಯು.ಜಿ. ಕೇಬಲ್‌ಗಳನ್ನು ಅಳವಡಿಸಿರುವ ರಸ್ತೆಗಳಲ್ಲಿ ನಾಮಫಲಕಗಳನ್ನು ಅಳವಡಿಸಲು ಬೆಸ್ಕಾಂ ಅಧಿಕಾರಿಗಳಿಗೆ ತಿಳಿಸಿದರು.
8. ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಮುಂದಿನ ಸಭೆಯಲ್ಲಿ ವಾರ್ಡ್ ನಂ. 99ಕ್ಕೆ ಸಂಬಂಧಿಸಿದಂತೆ ನಾಡಕಛೇರಿಗೆ ಬಂದಿರುವ ವಿಧವಾ ವೇತನ, ಅಂಗವಿಕಲ ವೇತನನ ಮತ್ತು ವಿದ್ಯಾರ್ಥಿಗಳಿಂದ ಜಾತಿ ಪ್ರಮಾಣ ಪತ್ರಗಳಿಗೆ ಸಲ್ಲಿಸಿರುವ ಅರ್ಜಿಗಳ ವಿವರವನ್ನು ನೀಡಲು ಸಭೆಯಲ್ಲಿ ಹಾಜರಿದ್ದ ಗ್ರಾಮ ಲೆಕ್ಕಾಧಿಕಾರಿಗಳಿಗೆ ತಿಳಿಸಿದರು.
9. ಉಮೇಶ್ ವಾರ್ಡ್ ಕಮಿಟಿ ಸದಸ್ಯರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆಯನ್ನು ಸರಿಯಾಗಿ ನಡೆಯುತ್ತಿರುವುದಿಲ್ಲವೆಂದು ಸಭೆಗೆ ತಿಳಿಸಿದರು. ಇದರ ಬಗ್ಗೆ ಕಿರಿಯ ಆರೋಗ್ಯ ಪರಿವೀಕ್ಷಕರು ಪರಿಶೀಲಿಸಿ ತಮ್ಮ ಸಮಸ್ಯೆಯನ್ನು ಬಗೆ ಹರಿಸುವುದಾಗಿ ಸಭೆಗೆ ತಿಳಿಸಿದರು.
10. ವಾರ್ಡ್ ವ್ಯಾಪ್ತಿಯಲ್ಲಿ ಹೊಸದಾಗಿ ನಿರ್ಮಾಣವಾಗಿರುವ ಶೌಚಾಲಯಗಳು ಮತ್ತು ಶುದ್ಧ ಕುಡಿಯುವ ನೀರಿನ ಘಟಕಗಳನ್ನು ನಿರ್ವಹಣೆ ಮಾಡಲು ಎಂ.ಓ.ಯು. ಮಾಡಲು ಕಾರ್ಯಪಾಲಕ ಅಭಿಯಂತರರಿಗೆ ತಿಳಿಸಲು ಸಭೆಯಲ್ಲಿ ತಿಳಿಸಿದರು.

ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರಿಗೆ ವಾರ್ಡ್ ಸಮಿತಿ ಸದಸ್ಯರುಗಳಿಗೆ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ವಾರ್ಡ್ ಸಮಿತಿ
ವಾರ್ಡ್ ನಂ. 99

ನೋಡಲ್ ಅಧಿಕಾರಿಗಳು
ವಾರ್ಡ್ ನಂ. 99

Scanned with CamScanner

ದಿನಾಂಕ: 22.03.2021ರಂದು ಮಧ್ಯಾಹ್ನ 3.00 ಗಂಟೆಗೆ ಶಿವನಗರ ವಾರ್ಡ್ ನಂ. 107 ರಲ್ಲಿ ನೋಡಲ್ ಅಧಿಕಾರಿಯವರಾದ **ಶ್ರೀ ಲಿಂಗಣ್ಣ ಗುಂಡಳ್ಳಿ,** ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರ:-

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು:-**

1. ಶ್ರೀ ಸೋಮಶೇಖರ್.ಜಿ.ಎಲ್ ಸಹಾಯಕ ಅಭಿಯಂತರರು, ವಾರ್ಡ್ ನಂ. 107 ಶಿವನಗರ
2. ಶ್ರೀ ಶಿವಕುಮಾರ್, ಹಿರಿಯ ಆರೋಗ್ಯ ಪರಿವೀಕ್ಷಕರು
3. ಶ್ರೀ ರವಿ, ಕಂದಾಯ ವಸೂಲಿಗಾರರು
4. ಶ್ರೀ ವೆಂಕಟೇಶ್, ಕಂದಾಯ ವಸೂಲಿಗಾರರು
5. ಶ್ರೀ ರಮೇಶ್, ಪಶು ಪಾಲನಾ ಇಲಾಖೆ.
6. ಶ್ರೀ ಹನಿಕೇಶ್, ಕಿರಿಯ ಆರೋಗ್ಯ ಪರಿವೀಕ್ಷಕರು
7. ಶ್ರೀ ಶರಣಬಸವ, ಮಾರ್ಷಲ್

ಶ್ರೀ ಸೋಮಶೇಖರ್.ಜಿ.ಎಲ್. ಕಾರ್ಯದರ್ಶಿಗಳು ಹಾಗೂ ಸಂಚಾಲಕರು, ವಾರ್ಡ್ ನಂ. 107ರವರು ಸಭೆಗೆ ಆಗಮಿಸಿರುವ ಎಲ್ಲರಿಗೂ ಸ್ವಾಗತ ಕೋರುತ್ತಾ, ಈ ಕೆಳಗಿನ ಅಂಶಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು.

1. ಶ್ರೀ ಶಿವಕುಮಾರ್, ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡುತ್ತಾ, ತಿಮ್ಮಯ್ಯ ರಸ್ತೆಯಲ್ಲಿರುವ ಸೌತ್ ಹೋಟೆಲ್ ರವರು ಪಕ್ಕದಲ್ಲಿರುವ ಖಾಲಿ ಜಾಗದಲ್ಲಿ ಹೋಟೆಲ್ ಕಸವನ್ನು ಹಾಕುತ್ತಿದ್ದು, ಸದರಿ ರವರಿಗೆ ದಂಡವನ್ನು ವಿಧಿಸಲು ತಿಳಿಸಲಾಗಿತ್ತು. ಅದರಂತೆ ಸದರಿ ಹೋಟೆಲ್ ಮಾಲೀಕರಿಗೆ ನೋಟಿಸ್ ಜಾರಿ ಮಾಡಲಾಗಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.
2. ವಾರ್ಡ್ ಕಮಿಟಿ ಸದಸ್ಯರು ಮಾತನಾಡುತ್ತಾ, ಮುತ್ಯಾಲಮ್ಮ ಉಧ್ಯಾನವನದಲ್ಲಿರುವ ಕೊಳವೆ ಬಾವಿಯ ನೀರು ಕಡಿಮೆಯಾಗಿರುವುದರಿಂದ ಉಧ್ಯಾನವನದ ಗಿಡಗಳಿಗೆ ನೀರಿನ ಅಭಾವವಾಗಿರುತ್ತದೆ ಎಂದು ಸಭೆಗೆ ತಿಳಿಸಿದರು. ಇದರ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಸಂಬಂಧಪಟ್ಟ ತೋಟಗಾರಿಕೆ ಇಲಾಖೆಯವರಿಗೆ ಮಾಹಿತಿಯನ್ನು ನೀಡಿ ಅಗತ್ಯ ಕ್ರಮ ಕೈಗೊಳ್ಳುವಂತೆ ವಾರ್ಡ್ ಕಾರ್ಯದರ್ಶಿಗೆ ತಿಳಿಸಿದರು.
3. ಶ್ರೀ ವೆಂಕಟೇಶ್ ವಾರ್ಡ್ ಕಮಿಟಿ ಸದಸ್ಯರು ಮಾತನಾಡುತ್ತಾ, 3ನೇ ಬ್ಲಾಕ್, ರಾಜಾಜಿನಗರ ಇಲ್ಲಿ ಜಲ ಮಂಡಳಿಯ ಕಾವೇರಿ ನೀರು ಸರಿಯಾಗಿ ಬರದೆ ಇರುವುದರಿಂದ ಇಲ್ಲಿನ ನಿವಾಸಿಗಳಿಗೆ ತೊಂದರೆಯಾಗುತ್ತಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು. ಇದಕ್ಕೆ ಉತ್ತರವಾಗಿ ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಬೇಸಿಗೆ ಕಾಲ ಇರುವುದರಿಂದ ಸರಿಯಾಗಿ ನೀರಿನ ಸರಬರಾಜು ಮಾಡಲು ಮುಂಜಾಗ್ರತಾ ಕ್ರಮ ವಹಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ. ಅಧಿಕಾರಿಗಳಿಗೆ ತಿಳಿಸುವಂತೆ ವಾರ್ಡ್ ಕಾರ್ಯದರ್ಶಿಗೆ ತಿಳಿಸಿದರು.
4. ವಾರ್ಡ್ ಕಮಿಟಿ ಸದಸ್ಯರು ಮಾತನಾಡುತ್ತಾ, ಸಂಚಾರಿ ಪೋಲಿಸ್ ಇಲಾಖೆಯವರು ವಾಹನಗಳಿಗೆ ದಂಡ ವಿಧಿಸಲು ಏಕಾ ಏಕಿ ರಸ್ತೆಯ ಮಧ್ಯ ಭಾಗಕ್ಕೆ ಬರುತ್ತಿರುವುದರಿಂದ ವಾಹನ ಸವಾರರಿಗೆ ವಾಹನವನ್ನು ನಿಯಂತ್ರಿಸಲು ಸಾಧ್ಯವಾಗದೆ ಅಪಘಾತಗಳು ಸಂಭವಿಸುತ್ತಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು. ನೋಡಲ್ ಅಧಿಕಾರಿಗಳು ಈ ಬಗ್ಗೆ ಮಾತನಾಡುತ್ತಾ, ಸದರಿ ವಿಷಯದ ಬಗ್ಗೆ ಪೋಲಿಸ್ ಅಧಿಕಾರಿಗಳ ಜೊತೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದೆಂದು ಸಭೆಯಲ್ಲಿ ತಿಳಿಸಿದರು.
5. ಶಿವನಗರ ವ್ಯಾಪ್ತಿಯಲ್ಲಿ ಬರುವ ಉಧಾನವನಗಳಲ್ಲಿ ಅಳವಡಿಸಿರುವ ಜಿಮ್ ಉಪಕರಣಗಳು ಹಾಳಾಗಿರುವುದರಿಂದ ಉಧ್ಯಾನವಕ್ಕೆ ಬರುವ ನಾಗರೀಕರಿಗೆ ತೊಂದರೆಯಾಗುತ್ತಿರುವುದಾಗಿ ಸಾರ್ವಜನಿಕರು ಸಭೆಯಲ್ಲಿ ತಿಳಿಸಿದರು. ಇದರ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಹಾಳಾಗಿರುವ ಉಪಕರಣಗಳನ್ನು ದುರಸ್ಥಿಪಡಿಸಲು ಸಂಬಂಧಪಟ್ಟವರಿಗೆ ತಿಳಿಸಲಾಗುವುದೆಂದು ಸಭೆಗೆ ತಿಳಿಸಿದರು.

**ಪು.ತಿ.ನೋ.**

Scanned with CamScanner

6. ಕರೋನಾ 2ನೇ ಅಲೆಯು ಬರುತ್ತಿರುವುದರಿಂದ ಈ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಬೇಕೆಂದು ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರೊಬ್ಬರು ತಿಳಿಸಿದರು. ಇದರ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಜಾಗೃತಿ ಮೂಡಿಸುವ ಕಾರ್ಯಕ್ರಮವು ಅವಶ್ಯಕವಾಗಿರುವುದರಿಂದ ಜಾಗೃತಿ ಕಾರ್ಯಕ್ರಮವನ್ನು ದಿನಾಂಕ: 27.03.2021ರ ಬೆಳಗ್ಗೆ 9.00 ಗಂಟೆಗೆ ಗಣಪತಿ ದೇವಸ್ಥಾನದ ಹತ್ತಿರ ಹಮ್ಮಿಕೊಂಡಿದ್ದು, ಸದರಿ ಕಾರ್ಯಕ್ರಮಕ್ಕೆ ಎಲ್ಲಾ ವಾರ್ಡ್ ಕಮಿಟಿ ಸದಸ್ಯರು, ಅಧಿಕಾರಿಗಳು ಮತ್ತು ಸಾರ್ವಜನಿಕರು ಹಾಜರಾಗುವಂತೆ ತಿಳಿಸಿದರು.

ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದಂತೆ ಸಭೆಯಲ್ಲಿ ತಿಳಿಸುವ ದೂರುಗಳನ್ನು ಸರಿಪಡಿಸಿ, ಮುಂದಿನ ಸಭೆಯಲ್ಲಿ ವರದಿಯನ್ನು ನೀಡುವಂತೆ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ
ವಾರ್ಡ್ ಸಮಿತಿ
ವಾರ್ಡ್ ನಂ. 107

ಸಹಿ/-
ಶ್ರೀ ಲಿಂಗಣ್ಣ ಗುಂಡಳ್ಳಿ
ನೋಡಲ್ ಅಧಿಕಾರಿಗಳು
ವಾರ್ಡ್ ನಂ. 107

**ಪ್ರತಿಯನ್ನು:**

1. ಮಾನ್ಯ ಜಂಟಿ ಆಯುಕ್ತರು [ಪಶ್ಚಿಮ] ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು [ಪಶ್ಚಿಮ] ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಆರೋಗ್ಯ ವೈದ್ಯಾಧಿಕಾರಿಗಳು [ಪಶ್ಚಿಮ] ಬಿ.ಬಿ.ಎಂ.ಪಿ. ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಕಾರ್ಯಪಾಲಕ ಅಭಿಯಂತರರು , ರಾಜಾಜಿನಗರ ವಿಭಾಗ/ಯೋಜನೆ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು [ಘನತ್ಯಾಜ್ಯ] ರಾಜಾಜಿನಗರ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು [ಬಿ.ಡಬ್ಲ್ಯೂ.ಎಸ್.ಎಸ್.ಬಿ.] ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬೀದಿ ದೀಪಗಳ ನಿರ್ವಹಣೆ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ
8. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು [ಬೆಸ್ಕಾಂ] ಉಪವಿಭಾಗ ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ
9. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು [ರಸ್ತೆ ಮತ್ತು ಮೂಲ ಭೂತ ಸೌಕರ್ಯ,] ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ
10. ಕಲ್ಯಾಣ ಅಧಿಕಾರಿ, ಪಶ್ಚಿಮ ವಲಯ, ಬಿ.ಬಿ.ಎಂ.ಪಿ. ರವರ ಮಾಹಿತಿಗಾಗಿ ಸಲ್ಲಿಸಿದೆ.
11. ಸಂಚಾರಿ ಪೋಲಿಸ್ ಠಾಣೆ, ರಾಜಾಜಿನಗರ/ವಿಜಯನಗರ ರವರ ಮಾಹಿತಿಗಾಗಿ ಸಲ್ಲಿಸಿದೆ.
12. ಪೋಲಿಸ್ ಠಾಣೆ, ರಾಜಾಜಿನಗರ/ಬಸವೇಶ್ವರನಗರ, ರವರ ಮಾಹಿತಿಗಾಗಿ ಸಲ್ಲಿಸಿದೆ.
13. ಅರಣ್ಯಾಧಿಕಾರಿ, ಬಿ.ಬಿ.ಎಂ.ಪಿ. ಪಶ್ಚಿಮ ರವರ ಮಾಹಿತಿಗಾಗಿ ಸಲ್ಲಿಸಿದೆ.

Scanned with CamScanner

ದಿನಾಂಕ: 22.03.2021 ರಂದು ಬೆಳಗ್ಗೆ 10.30 ಗಂಟೆಗೆ ಕಾಮಾಕ್ಷಿಪಾಳ್ಯ ವಾರ್ಡ್ ನಂ. 101 ರಲ್ಲಿ ಶ್ರೀ ಎ.ಎಸ್. ರಮೇಶ್, ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರ:-

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು:-**

1. ಶ್ರೀ ಎ.ಎಸ್. ರಮೇಶ್, ನೋಡಲ್ ಅಧಿಕಾರಿಗಳು
2. ಶ್ರೀ ಸೋಮಶೇಖರ್ ಸಹಾಯಕ ಅಭಿಯಂತರರು, [ಪ್ರಭಾರ] ವಾರ್ಡ್ ನಂ. 101 ಕಾಮಾಕ್ಷಿಪಾಳ್ಯ
3. ಶ್ರೀ ಬಿ.ಎ. ಶಂಕರ್ ನಾಯಕ್, ಸಹಾಯಕ ಅಭಿಯಂತರರು, ಬೆಸ್ಕಾಂ
4. ಶ್ರೀ ಸಿದ್ದರಾಜು, ಸಹಾಯಕ ಅಭಿಯಂತರರು, ಬೆಸ್ಕಾಂ
5. ಶ್ರೀ ಆನಂದ್, ಪಿ.ಎನ್. ಎ.ಎಸ್.ಐ. ಕಾಮಾಕ್ಷಿಪಾಳ್ಯ ಸಂಚಾರಿ ಪೋಲಿಸ್ ಠಾಣೆ,
6. ಶ್ರೀ ಬಸವರಾಜು, ಹೆಡ್ ಕಾನ್ಸ್‌ಟೇಬಲ್, ಬಸವೇಶ್ವರನಗರ
7. ಶ್ರೀಮತಿ ರಾಜೇಶ್ವರಿ, ಹಿರಿಯ ಆರೋಗ್ಯ ಪರಿವೀಕ್ಷಕರು
8. ಶ್ರೀ ವೆಂಕಟೇಶ್, ಕಂದಾಯ ಇಲಾಖೆ
9. ಶ್ರೀ ಬಿ.ವಿ. ವಾಸುದೇವ , ಅಸೆಸ್ಸರ್ 101
10. ಶ್ರೀಮತಿ ರೂಪಾ, ಕಿರಿಯ ಆರೋಗ್ಯ ಪರಿವೀಕ್ಷಕರು
11. ಶ್ರೀ ಅನಿಲ್ ರಂಗಣ್ಣ, ಸದಸ್ಯರು,
12. ಶ್ರೀ ಉಮಾಶಂಕರ್, ಸದಸ್ಯರು
13. ಶ್ರೀ ಅರವಿಂದ್, ಸದಸ್ಯರು
14. ಶ್ರೀ ಶ್ರೀನಿವಾಸ್.ಎ. ಸದಸ್ಯರು
15. ಶ್ರೀ ಗಂಗಯ್ಯ, ಸದಸ್ಯರು
16. ಶ್ರೀ ರವೀಂದ್ರನಾಥ್, ಸದಸ್ಯರು
17. ಶ್ರೀ ರಾಜೇಶ್.ಎಂ. ಸದಸ್ಯರು
18. ಶ್ರೀ ಗೋಪಾಲ್ ಕೃಷ್ಣ. ಸದಸ್ಯರು

ದಿನಾಂಕ: 08.03.2021 ರಂದು ನಡೆದ ಸಭೆಯಲ್ಲಿ ಹಲವಾರು ವಿಷಯಗಳನ್ನು ಚರ್ಚಿಸಿ, ಅದಕ್ಕೆ ಸಂಬಂಧಪಟ್ಟ ವಿಷಯಗಳಿಗೆ ಪರಿಹಾರ ತೆಗೆದುಕೊಳ್ಳಲಾಗಿರುತ್ತದೆ. ಹಾಗು ದಿನಾಂಕ: 22.03.2021ರಂದು ಬೆಳಗ್ಗೆ10.30 ಗಂಟೆಗೆ ವಾರ್ಡ್ ನಂ. 101 ಕಾಮಾಕ್ಷಿಪಾಳ್ಯ **ಎಸ್.ಬಿ.ಐ. ಆಫೀರರ್ಸ್ ಸಮುಧಾಯ ಭವನ, ಎಸ್.ಬಿ.ಐ. ಕಾಲೋನಿ, ಬಸವೇಶ್ವರನಗರ, ಕಾಮಾಕ್ಷಿಪಾಳ್ಯ,** ಇಲ್ಲಿ ಪಾಲಿಕೆ ಅಧಿಕಾರಿಗಳೊಂದಿಗೆ ಸಭೆಯನ್ನು ಕೈಗೊಂಡು ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಯಿತು.

1. ಶ್ರೀ ಅನಿಲ್ ರಂಗಣ್ಣ, ಮಾತನಾಡುತ್ತಾ, ಮಾಗಡಿ ಮುಖ್ಯ ರಸ್ತೆಯಲ್ಲಿ ಬೆಸ್ಕಾಂ ವತಿಯಿಂದ ಕೇಬಲ್ ಅಳವಡಿಸಲು ಅನುಮತಿ ಪಡೆಯದೆ ರಸ್ತೆಯನ್ನು ಕತ್ತರಿಸಿರುವುದರಿಂದ ಈ ರಸ್ತೆಯಲ್ಲಿ ಓಡಾಡುವ ವಾಹನ ಸವಾರರಿಗೆ ತೊಂದರೆಯಾಗುತ್ತಿರುವುದಾಗಿ ಸಭೆಗೆ ತಿಳಿಸಿದರು. ಇದರ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಸಂಬಂಧಪಟ್ಟ ಬೆಸ್ಕಾಂ ಇಲಾಖೆಯವರಿಗೆ ಕೂಡಲೇ ದುರಸ್ಥಿಪಡಿಸುವಂತೆ ಪತ್ರ ಬರೆಯಲು ವಾರ್ಡ್ ಕಾರ್ಯದರ್ಶಿಗೆ ತಿಳಿಸಿದರು.
2. ಶ್ರೀ ಉಮಾಶಂಕರ್ ರವರು ಮಾತನಾಡುತ್ತಾ, ಮ್ಯಾಕ್ಸ್ ಮುಲ್ಲರ್ ಶಾಲೆ ಹತ್ತಿರವಿರುವ ಖಾಲಿ ಜಾಗದಲ್ಲಿ ಸಾರ್ವಜನಿಕರು ರಾತ್ರಿಯ ಸಮಯದಲ್ಲಿ ಕಸವನ್ನು ಹಾಕುತ್ತಿರುವುದರಿಂದ ಅಲ್ಲಿನ ನಿವಾಸಿಗಳಿಗೆ ತೊಂದರೆಯಾಗುತ್ತಿರುವುದಾಗಿ ಸಭೆಗೆ ತಿಳಿಸಿದರು. ಇದರ ಬಗ್ಗೆ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡುತ್ತಾ, ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.
3. ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡುತ್ತಾ ಒಂದು ದಿನಕ್ಕೆ 100 ಕೋವಿಡ್ ಪರೀಕ್ಷೆಗಳನ್ನು ಮಾಡುತ್ತಿರುವುದಾಗಿ ಸಭೆಗೆ ತಿಳಿಸಿದರು.

**ಪು.ತಿ.ನೋ.**

Scanned with CamScanner

4. ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರೊಬ್ಬರು ಮಾತನಾಡುತ್ತಾ, ಎಸ್.ಬಿ.ಐ. ಆಫೀಸರ್ಸ್ ಕಾಲೋನಿಯ ಮುಖ್ಯ ರಸ್ತೆಯಲ್ಲಿ ವಾಹನ ದಟ್ಟಣೆ ಜಾಸ್ತಿಯಾಗುತ್ತಿರುವುದರಿಂದ ಸದರಿ ರಸ್ತೆಯನ್ನು One Way ಆಗಿ ಮಾಡಬೇಕೆಂದು ಸಭೆಯಲ್ಲಿ ಕೋರಿದರು. ಇದಕ್ಕೆ ಉತ್ತರವಾಗಿ ಸಭೆಗೆ ಹಾಜರಿದ್ದ ಎ.ಎಸ್.ಐ. ಸಂಚಾರಿ ಪೋಲಿಸ್ ಠಾಣೆ ರವರು ವಸತಿ ಪ್ರದೇಶದಲ್ಲಿ One Way ಮಾಡುವುದು ಸಾಧ್ಯವಿಲ್ಲವೆಂದು ಸಭೆಗೆ ತಿಳಿಸಿದರು.

5. ಶ್ರೀ ಉಮಾಶಂಕರ್ ರವರು ಮಾತನಾಡುತ್ತಾ, ಆಲದ ಮರ ಪಾರ್ಕನಲ್ಲಿ ಕಾಮಗಾರಿ ನಡೆಯುತ್ತಿದ್ದು, ಸದರಿ ಕಾಮಗಾರಿಯು ಗುಣಮಟ್ಟದಿಂದ ಕೂಡಿರುವುದಿಲ್ಲವೆಂದು ಸಭೆಗೆ ತಿಳಿಸಿದರು. ಇದರ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಸಂಬಂಧಪಟ್ಟವರಿ ತ್ಳಿಸಿ ಕ್ರಮ ಕೈಗೊಳ್ಳಲಾಗುವುದೆಂದು ಸಭೆಯಲ್ಲಿ ತಿಳಿಸಿದರು.
6. ಶ್ರೀ ಅನಿಲ್ ರಂಗಣ್ಣ ರವರು ಮಾತನಾಡುತ್ತಾ, ಗಾಡಿ ಮುದ್ದಣ್ಣ ರಸ್ತೆಯಲ್ಲಿ, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಸಬ್‌ಲೇನ್ ವತಿಯಿಂದ ಪೈಪ್ ಅಳವಡಿಸಲು ರಸ್ತೆಯನ್ನು ಕತ್ತರಿಸಿದ್ದು, ಸದರಿ ರಸ್ತೆಯನ್ನು ದುರಸ್ಥಿಪಡಿಸದೆ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದಾಗಿ ತಿಳಿಸಿದರು. ಇದರ ಬಗ್ಗೆ ಸಂಬಂಧಪಟ್ಟವರಿಗೆ ತಿಳಿಸಲು ನೋಡಲ್ ಅಧಿಕಾರಿಗಳು ವಾರ್ಡ್ ಸಮಿತಿ ಕಾರ್ಯದರ್ಶಿ ರವರಿಗೆ ಸೂಚಿಸಿದರು.
7. ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಬೇಸಿಗೆ ಕಾಲ ಪ್ರಾರಂಭವಾಗುವುದರಿಂದ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಅಧಿಕಾರಿಗಳು ಎಲ್ಲಾ ಸಮಸ್ಯೆ ಇರುವ ಪ್ರದೇಶಗಳಿಗೆ ಭೇಟಿ ನೀಡಿ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.
8. ಹಿರಿಯ ನಾಗರೀಕರು ಮಾತನಾಡುತ್ತಾ, ಎಸ್.ಬಿ.ಐ. ಆಫಿಸರ್ಸ್ ಕಾಲೋನಿಯಲ್ಲಿ ಕಾವೇರಿ ನೀರು ಸರಿಯಾಗಿ ಸರಬರಾಜು ಆಗುತ್ತಿರುವುದಿಲ್ಲವೆಂದು ಸಭೆಯಲ್ಲಿ ತಿಳಿಸಿದರು. ಇದರ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡುತ್ತ, ಸಂಬಂಧಪಟ್ಟವರಿಗೆ ತಿಳಿಸಲು ವಾರ್ಡ್ ಕಾರ್ಯದರ್ಶಿಗೆ ಸೂಚಿಸಿದರು.
9. ವಾರ್ಡ್ ಕಮಿಟಿ ಸದಸ್ಯರುಗಳು ಮಾತನಾಡುತ್ತಾ, ಕಂದಾಯ ಇಲಾಖೆಗೆ ಒಂಟಿ ಮನೆಗಳಿಗೆ ಸಂಬಂಧಪಟ್ಟ ಕಡತಗಳನ್ನು ಸಲ್ಲಿಸಿ, 8 ತಿಂಗಳು ಕಳೆದರು ಸಹ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲವೆಂದು ಸಭೆಯಲ್ಲಿ ತಿಳಿಸಿದರು. ಇದರ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡುತ್ತ, ಈ ಕೂಡಲೇ ಕಡತಳನ್ನು ಪರಿಶೀಲಿಸಿ, ಹಿಂಬರಹ ನೀಡಬೇಕೆಂದು ಸಭೆಯಲ್ಲಿ ಹಾಜರಿದ್ದ ಕಂದಾಯ ಅಧಿಕಾರಿಗಳಿಗೆ ಸೂಚಿಸಿದರು. ಮತ್ತು ಮುಂದಿನ ಸಭೆಗೆ ಸಹಾಯಕ ಕಂದಾಯ ಅಧಿಕಾರಿಗಳು ಖುದ್ದಾಗಿ ಹಾಜರಾಗಬೇಕೆಂದು ಸಭೆಗೆ ತಿಳಿಸಿದರು.

ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರಿಗೆ ವಾರ್ಡ್ ಸಮಿತಿ ಸದಸ್ಯರುಗಳಿಗೆ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳಿಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ವಾರ್ಡ್ ಸಮಿತಿ

ನೋಡಲ್ ಅಧಿಕಾರಿಗಳು
ವಾರ್ಡ್ ನಂ. 101

Scanned with CamScanner